ಆವರಣಕ್ಕೆ ತಾಗಿದಂತಿದ್ದ ಮಕ್ಕಳ ಶಾಲೆಯಿಂದ ಆಗಲೇ 'ಭಾರತ ಜನನಿಯ ತನುಜಾತೆ ಜಯಹೇ ಕರ್ನಾಟಕ ಮಾತೆ...' ನಾಡಗೀತೆಯು ಮಕ್ಕಳ ಬಾಯಲ್ಲಿ ಮುದ್ದಾಗಿ ಕೇಳಿ ಬರುತ್ತಿದ್ದುದರಿಂದ ವೈದ್ಯರು ಆ ನಾಡಗೀತೆ ಮುಗಿಯುವವರೆಗೆ ಅಲ್ಲೇ ತಲೆಬಾಗಿ ನಿಂತುಕೊಂಡರು. ಕಾರಿನಿಂದ ಇಳಿದ ರಾಮಯ್ಯ ಆಳ್ವರೂ ನಾಡಗೀತೆಗೆ ವಂದಿಸಲು ಹಾಗೆ, ನಿಂತರು. ಉಳಿದವರು ಕಾರೊಳಗೆ ಹಾಗೇ ಕುಳಿತಿದ್ದರು.

ನಾಡಗೀತೆ ಮುಗಿದೊಡನೆ ಡಾ. ವಾಹೀದ್ ಅವರು ತಾವೇ ಸ್ವತಃ ಮುಂದೆ ಬಂದು, ಕಾರಿನಿಂದ ಇಳಿದು ತಮಗೆ ಕೈ ಮುಗಿಯುತ್ತಿದ್ದ ರಾಮಯ್ಯ ಆಳ್ವರ ಕಾಲಿಗೆ ಬಗ್ಗಿ ನಮಸ್ಕರಿಸಿದರು. 'ನಾನು ನಿಮ್ಮ ಶಿಷ್ಯ, ಊರಿನ ಒಣ ಮೀನು ವ್ಯಾಪಾರಿ ರುಸ್ತುಂಸ್ಯಾಬರ ಮಗ' ಎಂದು ಡಾ. ವಾಹೀದ್ ಅವರು ಪರಿಚಯಿಸಿಕೊಳ್ಳುವಾಗ ರಾಮಯ್ಯಾಳ್ವರ ಎದೆ ತುಂಬಿ ಬಂದಿತ್ತು.

ಪರಸ್ಪರ ಪರಿಚಯವಾದೊಡನೆ ಡಾ. ವಾಹೀದ್ ಅವರು 'ಈಗ ಒಂದರ್ಧ ಗಂಟೆಯಲ್ಲಿ ಬಂದೆ. ಓ ಅಲ್ಲಿರುವ ಮಕ್ಕಳನ್ನು ಮಾತನಾಡಿಸುವುದಿದೆ, ಎಂದು ಪಕ್ಕದಲ್ಲಿದ್ದ ಹುಲ್ಲು ಹಾಸಿನ ಶಾಲೆಯ ಬಡ್ಲಾಗೆ ಮೂಲೆಯಲ್ಲಿದ್ದ ಕಟ್ಟಡದತ್ತ ಕೈ ತೋರಿದವರು ತಕ್ಷಣವೆ ತನ್ನ ಬೆನ್ನ ಹಿಂದಿದ್ದ ಸಹಾಯಕನನ್ನು ಕರೆದು, ಇವರನ್ನೆಲ್ಲ ನನ್ನ ಸ್ಪೆಷಲ್ ವಿಸಿಟರ್ಸ್ ಛೇಂಬರ್‌ನಲ್ಲಿ ಕೂರಿಸು, ನಾನು ಒಂದು ರೌಂಡ್ ಮುಗಿಸಿ ಬರ್ತೇನೆ' ಎಂದು ಹೇಳಿ ಮುನ್ನಡೆದಿದ್ದರು.

ಡಾ. ವಾಹೀದ್ ಅವರು 'ವಿಶೇಷ ಸಾಮರ್ಥ್ಯ'ದ ಮಕ್ಕಳ ಶಾಲೆಯ ಆವರಣದೊಳಗಿನ ಹುಲ್ಲುಹಾಸಿನ ಮೇಲೆ ಕಾಲಿಡುವಷ್ಟರಲ್ಲಿ... ಶಾಲೆಯ ಹುಲ್ಲುಹಾಸಿನಿಂದ 'ನಮಸ್ತೆ ಅಪ್ಪಾಜಿ ನಮಸ್ತೆ' ಎಂಬ 'ಸಮೂಹಗಾನ' ಕೇಳಿಬಂದಿತ್ತು. ಕಾರಿನಲ್ಲಿದ್ದವರೆಲ್ಲ ಕೆಳಗಿಳಿದು, ಆ ಬಾಲವನದ ಚಂದವನ್ನು ನೋಡುತ್ತಿದ್ದರೆ... ಕುಮುದಳ ಕೈಯೊಳಗಿದ್ದ ಕೌಶಿಕನು ಮಾತ್ರ ಆ 'ಸಮೂಹಗಾನ'ವನ್ನು ಕೇಳಿಸಿಕೊಂಡವನೆ ತಲೆಯನ್ನು ಅತ್ತ ತಿರುಗಿಸಿ ಆವರಣದ ಒಳಗಿನ ಮಕ್ಕಳನ್ನು ದಿಟ್ಟಿಸತೊಡಗಿದ್ದ. ಆ ಮಕ್ಕಳ ಸುತ್ತ ಏಳೆಂಟು ಬಾತುಕೋಳಿಗಳು ಆಚೀಚೆ, 'ಮಾರ್ಚ್ ಪಾಸ್ಟ್' ಮಾಡುತ್ತಿದ್ದವು. ಅಲ್ಲಿನ ಮರಗಳ ಮೇಲೆಲ್ಲ ಹತ್ತಾರು ಜಾತಿಯ ಹಕ್ಕಿಗಳು ಯಾವುದ್ಯಾವುದೋ ಸಂಭ್ರಮದಲ್ಲಿದ್ದವು. ಅಲ್ಲೇ ದೂರದಲ್ಲಿ ಮೇಯುತ್ತಿರುವ ಹಸುಕರುಗಳ ಮೇಲೆ ಬಿಳಿಕೊಕ್ಕರೆಗಳು ಕೂತು ಸವಾರಿ ಹೊರಡುವ ಕ್ಷಣಕ್ಕಾಗಿ ಕಾಯುತ್ತಿದ್ದವು. ಆವರಣದೊಳಗಿನ ತೋಟದಲ್ಲಿ ನೂರಾರು ಬಣ್ಣದ ಹೂಗಳು ಕೌಶಿಕನನ್ನೇ ದಿಟ್ಟಿಸುತ್ತಿದ್ದವು. ಕೌಶಿಕ ತದೇಕಚಿತ್ತನಾಗಿ ಆ ಶಾಲೆಯ ಆವರಣದ ಚಂದ ಹಾಗೂ ಹುಲ್ಲುಹಾಸಿನ 'ಸಂಭ್ರಮ'ವನ್ನೊಮ್ಮೆ ಅಲ್ಲಿದ್ದ ಮಕ್ಕಳನ್ನೊಮ್ಮೆ ನೋಡುತ್ತಿದ್ದಂತೆ, ಆತ ಕುಮುದಳ ಕೈಯೊಳಗೆ ಮಿಸುಕಾಡುತ್ತ... ನಿಧಾನಕ್ಕೆ ಮಡೆಂಜಿ ಮೀನು ಜಾರಿದಂತೆ... ಸೊಯ್ಯನೆ ಕೆಳಗೆ ಜಾರತೊಡಗಿದ್ದ. ತಾಯಿಗೆ ಭಯದಿಂದ ಎದೆ ನಡುಗತೊಡಗಿತ್ತು. ಹಾಗೆ ಜಾರುತ್ತಿದ್ದ ಮಗ... ತಟ್ಟನೆ ನೆಲದಲ್ಲಿ ಜೋಲಿ ಬಂದವನಂತೆ ಜೋಲಾಡುತ್ತ... ಮರುಕ್ಷಣದಲ್ಲಿ ನಿಂತೇ ಬಿಟ್ಟ! ಹಾಗೆಯೇ... ಒಂದೊಂದೇ ಹೆಜ್ಜೆಗಳನ್ನಿಡುತ್ತ ಶಾಲೆಯ ಆವರಣದತ್ತ ನಡೆಯತೊಡಗಿದ್ದ. ತನ್ನ ಒಂದೊಂದು ಹೆಜ್ಜೆಯೂ ತನ್ನ ಆತ್ಮವಿಶ್ವಾಸದ ಪ್ರತೀಕದ ಹೆಜ್ಜೆಯು ಎನ್ನುವಂತಹ ಭಾವ ತೋರುತ್ತ ಕೌಶಿಕ ತಾಯಿ ಕುಮುದಳ ಮುಖ ನೋಡಿ ನಕ್ಕ.

ಈ ದೃಶ್ಯವನ್ನು ನೋಡಲು ರಾಮಯ್ಯ ಆಳ್ವರಿಗೆ ಎರಡು ಕಣ್ಣು ಸಾಲುತ್ತಿಲ್ಲ ಎಂದೆನಿಸಿದಂತಾಗಿ, ತಟ್ಟನೆ ತಾವೇ ಓಡಿ ಹೋಗಿ ಆತನನ್ನು ಎತ್ತಿಕೊಂಡು ಬಂದು 'ನೀನು ಮತ್ತೆ